ಅ) ಬೆಂಗಳೂರು ನಗರದಲ್ಲಿ ಪುಷ್ಪಕ್ ಸಾರಿಗೆ ವ್ಯವಸ್ಥೆಯನ್ನು ಎಂದಿನಿಂದ ಜಾರಿಗೆ ತರಲಾಗಿದೆ?

ಆ) ಪುಷ್ಪಕ್ ಜಾರಿಗೆ ತಂದಿರುವ ಉದ್ದೇಶವೇನು?

ಇ) ಈ ಉದ್ದೇಶ ಸಫಲವಾಗುತ್ತಿದೆಯೇ?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ದಿನಾಂಕ 16.6.1993ರಿಂದ

ಆ) ಬೆಂಗಳೂರು ನಗರದ ಪ್ರಯಾಣಿಕರಿಗೆ ಅನುಕೂಲ ಮತ್ತು ವೇಗದ ಸಾರಿಗೆ ಸೌಲಭ್ಯವನ್ನು ಕೊಡುವ ಉದ್ದೇಶದಿಂದ.

ಇ) ಹೌದು

ಆಟೋರಿಕ್ಷಾ ಚಾಲಕರ ಬಗ್ಗೆ

454 - ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಟೋರಿಕ್ಷಾ ಚಾಲಕರು ಪ್ರಯಾಣಿಕರು ಕರೆದ ಕಡೆ ಬಾರದಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಮಹಿಳೆಯರು, ಶಾಲಾ ಮಕ್ಕಳು ಹಾಗೂ ವೃದ್ಧರು ಇವರು ಕರೆದ ಕಡೆ ಬಾರದಿರುವ ಆಟೋರಿಕ್ಷಾ ಚಾಲಕರಿಂದ ಉಂಟಾಗುತ್ತಿರುವ ಕಿರುಕುಳದ ಬಗ್ಗೆ ಸರ್ಕಾರ ನಿರ್ದಿಷ್ಟವಾದ ಹಾಗೂ ಕಠಿಣಕರವಾದ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆಯೇ?

ಈ) ಹಾಗಿದ್ದಲ್ಲಿ, ಅದರ ವಿವರಗಳನ್ನು ಒದಗಿಸುವುದು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಮಂತ್ರಿಗಳು) :

ಅ) ಬಂದಿದೆ.

ಆ) ಆಟೋರಿಕ್ಷಾ ಚಾಲಕರಿಂದ ಕಿರುಕುಳಕ್ಕೊಳಗಾದ ಬೆಂಗಳೂರಿನಿಂದ ಪ್ರಯಾಣಿಕರು, ಅದರಲ್ಲೂ ಹೆಂಗಸರು, ಶಾಲಾ ಮಕ್ಕಳು ಮತ್ತು ವೃದ್ಧರು ಕರೆದಾಗ ಬಾರದೇ ಇರುವ ಹೆಚ್ಚುದು ವಸೂಲಿ ಮಾಡುವ ಮತ್ತು ಪ್ರಯಾಣಿಕರೊಂದಿಗೆ ಅಸಭ್ಯವಾಗಿ ವರ್ತಿಸುವ ಚಾಲಕರ ವಿರುದ್ಧ ದೂರನ್ನು ಸಲ್ಲಿಸಬಹುದು. ದೂರಿನಲ್ಲಿ ವಾಹನದ ನೋಂದಣಿ ಸಂಖ್ಯೆ, ದಿನಾಂಕ, ಸ್ಥಳ ಮತ್ತು ಸಮಯವನ್ನು ನಮೂದಿಸುವುದಲ್ಲದೆ ದೂರುದಾರರ ಹೆಸರು ಮತ್ತು ವಿಳಾಸವನ್ನು ನಮೂದಿಸಿ, ಪ್ರಾದೇಶಿಕ ಸಾರಿಗೆ ಅಧಿಕಾರಿ, ಕೋರಮಂಗಲ, ಬೆಂಗಳೂರು (ಕೇಂದ್ರ) ಇವರ ಕಛೇರಿಯಲ್ಲಿ ಸ್ಥಾಪಿಸಿರುವ ನಿಯಂತ್ರಣ ಕೊಠಡಿಗೆ ಸಲ್ಲಿಸಿದಲ್ಲಿ ಮೋಟಾರು ವಾಹನಗಳ ನಿಯಮಾನುಸಾರ ಆಟೋರಿಕ್ಷಾ ಚಾಲಕರು ಮತ್ತು ಮಾಲೀಕರ ವಿರುದ್ಧ ಕಾನೂನಿನ ಕ್ರಮ ಕೈಗೊಳ್ಳಲಾಗುತ್ತದೆ.

ಇ) ಹೌದು, ಈ ರೀತಿ ಬಂದಂತಹ ದೂರಿನ ಆಧಾರದ ಮೇಲೆ ವಿಚಾರಣೆ ನಡೆಸಿ ರುಜುವಾತಾದಲ್ಲಿ ತಪ್ಪಿತಸ್ಥ ಚಾಲಕರ ವಾಹನ ಮಾಲೀಕರ ವಿರುದ್ಧ ಮೋಟಾರು ವಾಹನ ಕಾಯ್ದೆ 1988 ಅಡಿಯಲ್ಲಿ ರಚಿತಗೊಂಡಿರುವ ನಿಯಮದಂತೆ ಕ್ರಮವನ್ನು ಕೈಗೊಂಡು ಚಾಲನಾ ಪತ್ರವನ್ನು ಅಮಾನತ್ತುಗೊಳಿಸುವ ಮತ್ತು ದಂಡ ವಿಧಿಸಿರುವ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಈ) ದಿನಾಂಕ 1-4-95 ರಿಂದ 31-12-95ರ ವರೆಗೆ ತಪ್ಪಿತಸ್ಥ ಆಟೋರಿಕ್ಷಾ ಚಾಲಕರ ಮತ್ತು ಮಾಲೀಕರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಂಡಿದ್ದು,

22 ಪ್ರಕರಣಗಳನ್ನು ದಾಖಲಿಸಲಾಗಿದೆ. ಅವುಗಳಲ್ಲಿ 03 ಚಾಲನಾ ಅನುಜ್ಞಾ ಪತ್ರಗಳನ್ನು ಅಮಾನತ್ತುಗೊಳಿಸಿದ್ದು, 15 ಪ್ರಕರಣಗಳಲ್ಲಿ 3,960-00 ರೂಪಾಯಿಗಳ ದಂಡವನ್ನು ವಿಧಿಸಲಾಗಿದೆ. ಉಳಿದ 04 ಪ್ರಕರಣಗಳಲ್ಲಿ ತನಿಖೆ ನಡೆಸಲಾಗುತ್ತಿದೆ.

ಜಿಲ್ಲೆ ಹಾಗೂ ತಾಲ್ಲೂಕುಗಳ ಪುನರ್-ವಿಂಗಡನೆ

478 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಿಲ್ಲೆ ಹಾಗೂ ತಾಲ್ಲೂಕುಗಳ ಪುನರ್ ವಿಂಗಡನೆ ಕುರಿತು ನೇಮಕಗೊಂಡ ಸಮಿತಿಗಳ ಶಿಫಾರಸ್ ಆಧರಿಸಿ ರಾಜ್ಯದ ಜಿಲ್ಲೆ ಹಾಗೂ ತಾಲ್ಲೂಕುಗಳ ಪುನರ್ ವಿಂಗಡನೆಗೆ ಸರಕಾರ ನೀಡಿದ ಭರವಸೆ ಪೂರೈಸಲು ಯಾವ ಕ್ರಮ ಕೈಗೊಂಡಿದೆ?

ಆ) ಭಾರಿ ಕ್ಷೇತ್ರ ವಿಸ್ತಾರ ಹಾಗೂ ಜನಸಂಖ್ಯೆ ಹೊಂದಿರುವ ಜಿಲ್ಲೆಗಳ ಪುನರ್ ರಚನೆ ತೀವ್ರ ಅವಶ್ಯವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಜಿಲ್ಲೆ ಪುನರ್ ವಿಂಗಡನೆಗೆ ಸರಕಾರ ಬರಲಿರುವ ಬಜೆಟ್ಟಿನಲ್ಲಿ ಹಣ ಒದಗಿಸಲು ಚಿಂತನೆ ನಡೆಸಿದೆಯೇ?

ಈ) ಈ ಮೊದಲು ಭರವಸೆ ಕೊಟ್ಟ ಪ್ರಕಾರ ಮುಂದಿನ ಹಣಕಾಸು ವರ್ಷದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಪುನರ್ ವಿಂಗಡನೆ ಮಾಡಲಾಗುವುದೆ?

ಉ) ಹಾಗಿದ್ದಲ್ಲಿ, ಗದಗ ಜಿಲ್ಲಾ ರಚನೆಗೆ ಮೊದಲ ಪ್ರಾಶಸ್ತ್ಯ ಸಿಗುವುದೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಹೌದು

ಇ) ಸರ್ಕಾರದ ಪರಿಶೀಲನೆಯಲ್ಲಿದೆ

ಈ) ಪ್ರಶ್ನೆ 'ಅ'ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ

ಉ) ಪ್ರಶ್ನೆ 'ಅ'ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಸರ್ವೆ ಇಲಾಖೆಯಲ್ಲಿ ಜಮೀನಿನ ಅಳತೆಗೆ ಇರುವ ನಿಯಮ

465 - ಶ್ರೀ ಎಸ್. ಶಿವಣ್ಣ (ತುಮಕೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ವೆ ಇಲಾಖೆಯಲ್ಲಿ ಯಾವ ಆಧಾರದ ಮೇಲೆ ಜಮೀನಿನ ಅಳತೆ ಮಾಡಲಾಗುತ್ತದೆ?

ಆ) ಹಾಗೂ ಜಮೀನಿನ ಅಳತೆಗೆ ಸಂಬಂಧಿಸಿದಂತೆ ನಿಯಮವೇನಾದರೂ ಇದ್ದಲ್ಲಿ, ವಿವರ ನೀಡುವುದು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಕರ್ನಾಟಕ ಭೂಕಂದಾಯ ಅಧಿನಿಯಮ, 1964 ಕರ್ನಾಟಕ ಭೂಕಂದಾಯ ನಿಯಮಾವಳಿ, 1966ರಂತೆ ಹಾಗೂ ಸರ್ವೆ ಕೈಪಿಡಿಯಲ್ಲಿನ ಸೂಚನೆಗಳಂತೆ ಜಮೀನಿನ ಅಳತೆ ಮಾಡಲಾಗುತ್ತದೆ.

ಆ) ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ ಅಧ್ಯಾಯ-9 ಹಾಗೂ ಕರ್ನಾಟಕ ಭೂಕಂದಾಯ ನಿಯಮ, 1966ರ ಅಧ್ಯಾಯ-8ರಲ್ಲಿರುವ ನಿಯಮಾವಳಿ-47ರಿಂದ